


ಒತ್ತಿಕೊಂಡು ಕುಳಿತು ಕಾಮಿಕ್ಸ್ ಓದುವುದು ನನಗೆ ತುಂಬಾ ಇಷ್ಟವಾಗುತ್ತಿತ್ತು. ಅವನು ನನ್ನ ತೊಡೆ ಮೇಲೆ ತಲೆಯಿಟ್ಟು ಮಲಗಿಕೊಂಡು ಓದುವಾಗ ನನಗೆ ತುಂಬಾ ಸಂತೋಷವಾಗುತ್ತಿತ್ತು. ಅವನ ಗುಂಗುರು ಕೂದಲಿನಲ್ಲಿ ಬೆರಳುಗಳನ್ನು ಆಡಿಸುತ್ತಾ, ಅವನ ಕುತ್ತಿಗೆಯನ್ನು ಸವರುತ್ತಿದ್ದೆ. ಅತ್ಯಂತ ಸಂತಸದಿಂದ ಬೇಸಿಗೆ ರಜೆಗಳು ಕಳೆಯುತ್ತಿದ್ದವು.

ರಿಚಿಗೆ ಬಾಲಂಗೋಚಿಯಾಗಿ ಸುತ್ತಾಡುವ ಕಾರಣದಿಂದ ನಾನು ಅಪ್ಪಅಮ್ಮನ ಸಿಟ್ಟಿಗೆ ಗುರಿಯಾದೆ. ಅವರಿಗೆ ಯಾಕೆ ಅವನು ಇಷ್ಟವಾಗುತ್ತಿಲ್ಲ ಎಂದು ನನಗೆ ಅರ್ಥವಾಗಲಿಲ್ಲ.

"ಅವನ ಅವತಾರ ನೋಡು... ಅದೇನು ಕೂದಲು, ಅದೇನು ಬಟ್ಟೆ... ಸಿನಿಮಾ ಹೀರೋ ಅಂದ್ಕೊಂಡಿದಾನೆ! ಆಗಲೇ ಅವನಿಗೆ ಇಪ್ಪತ್ತೈದು ವರ್ಷ ವಯಸ್ಸಾಗಿದೆ, ಇನ್ನೂ ಡಿಗ್ರಿ ಮೊದಲನೇ ವರ್ಷ ದಾಟಿಲ್ಲ... ಅದೂ ಜುಜುಬಿ ಬಿ.ಎ" ಎಂದು ಅಮ್ಮ ಅಸಹನೆಯಿಂದ ಹೇಳುತ್ತಿದ್ದಳು.

"ಅದರಿಂದ ನಿಮಗೇನು ಕಷ್ಟ?" ಅಂತಲೋ, "ನಿಂಗೆ ಅವನು ಸರಿಯಾಗಿ ಗೊತ್ತೇ ಇಲ್ಲ" ಎಂದೋ, ಒಮ್ಮೊಮ್ಮೆ "ಓಣಿಯ ಎಲ್ಲಾ ಹುಡುಗರ ಜೊತೆ ಎಷ್ಟು ಚೆನ್ನಾಗಿ ಬೆರೀತಾನೆ. ನಿಂಗೆ ಅದ್ಯಾಕೆ ಕಾಣಿಸವಲ್ಲದು?" ಎಂದು ನಾನು ಅವನನ್ನು ಸಮರ್ಥಿಸಿಕೊಳ್ಳುತ್ತಿದ್ದೆ.

ಅಮ್ಮನ ಬಳಿ ಅದಕ್ಕೆಲ್ಲಾ ಉತ್ತರವಿತ್ತು. "ಮೂವತ್ತು ದಾಟಿದ್ರೂ ಕೆಲಸ ಸಿಗಲಿಲ್ಲ ಅಂದ್ರೆ ಅವನಿಗೆ ಆಗ ಗೊತ್ತಾಗ್ತದೆ" ಎಂದೋ, "ಓಹ್, ಇಂಥ ಹುಡುಗರನ್ನ ಬೇಕಾದಷ್ಟು ನೋಡೀನಿ. ಈ ಹುಡುಗರಿಗೆ ಕೇಳಿದ್ದು ಕೊಡಿಸ್ತಾನೆ ಅಂತ ಕಾಣುತ್ತೆ" ಎಂದು ಹೇಳುತ್ತಿದ್ದಳು.

ನಾನು ನೋಡಿದಂತೆ ಆಕೆ ಎಂದೂ ರಿಚಿಯನ್ನು ನೋಡಲಿಲ್ಲ. ಅವನು ಕಣ್ಣು ಹೊಡೆದರೆ, ಮುಚ್ಚಿದ ಕಣ್ಣಿನ ಮತ್ತೊಂದು ಬದಿಯ ತುಟಿಯ ಭಾಗದಲ್ಲಿ ನಗುತ್ತಿದ್ದ. ನಾನು ಅದನ್ನು